''ಮ್ಯಾನೇಜರರು ಹೇಳಲಿಲ್ಲವಾ? ಅವರು ಹೇಳಿದ್ದೇ ಸಂಬಳ. ಅವರು ಹೇಳಲಿಲ್ಲವಾದರೆ ಅವರಿನ್ನೂ ನಿರ್ಧರಿಸಿಲ್ಲ, ಮುಂದೆ ಹೇಳ್ತಾರೆ. ಇದರಲ್ಲಿ ನನ್ನದೇನೂ ಇಲ್ಲ'' ಎಂದೆ ನಾನು.

''ಹಿಂದೆ ಇದ್ದವನಿಗೆ ಎಷ್ಟು ಕೊಡುತ್ತಿದ್ದರು?'' ಕೇಳಿದ ಆತ.

ಆತನ ಧೈರ್ಯಕ್ಕೆ ಮತ್ತಷ್ಟು ಖುಷಿಯಾಯಿತು ನನಗೆ! ಆದರೂ ಇದು ಉತ್ತರಿಸಬಾರದ ಪ್ರಶ್ನೆ! ಒಂದು ಹುದ್ದೆಯಲ್ಲಿ ಹಿಂದೆ ಇದ್ದವರಿಗೆ ಕೊಡುತ್ತಿದ್ದ ಸಂಬಳವನ್ನೇ ಹೊಸದಾಗಿ ಸೇರುವವರಿಗೂ ನೀಡಬೇಕು ಎಂಬ ನಿಯಮವೇನೂ ಇಲ್ಲ. ಎಕೌಂಟ್ಸ್ ಮತ್ತು ಎಚ್.ಆರ್. ಮ್ಯಾನೇಜರ್ ಆಗಿದ್ದ ನಾನು ಫೈಲು ಎದುರಿಗೇ ಇಟ್ಟುಕೊಂಡು, ಹಿಂದೆ ಇದ್ದವನ ಸಂಬಳ ಎಷ್ಟೆಂದು ನನಗೆ ಗೊತ್ತಿಲ್ಲ ಅನ್ನುವ ಹಾಗಿಲ್ಲವಲ್ಲ! ಅವನ ಮುಖವನ್ನೇ ನೋಡಿದೆ. ಬರೇ ತಿಳಿದುಕೊಳ್ಳುವ ಕುತೂಹಲದಿಂದ ಬಂದ ಪ್ರಶ್ನೆ ಅದಲ್ಲ. ಹಿಂದೆ ಇದ್ದವನಿಗೆ ಕೊಡುತ್ತಿದ್ದ ಸಂಬಳವೇ ತನಗೂ ಮುಂದುವರೆಯಬೇಕೆಂಬ ಬೇಡಿಕೆಯೇ ಅವನ ಮುಖದಲ್ಲಿತ್ತು. ಮ್ಯಾನೇಜರರ ಕ್ಯಾಂಡಿಡೇಟಾಗಿ ಅವರಲ್ಲಿ ಕೇಳಲು ಹಿಂದೇಟು ಹಾಕಿದನೋ... ಅಥವಾ ಅವರಲ್ಲಿ ಕೇಳಲು ಧೈರ್ಯ ಸಾಕಾಗಲಿಲ್ಲವೇನೋ!...

ಇಂತಹ ಸಾವಿರ ಪರಿಸ್ಥಿತಿಗಳನ್ನು ಕಂಡವನು ನಾನು. ಸ್ವಲ್ಪ ದನಿಯೇರಿಸಿ, ''ನನಗೆ ಸಿಗುವ ಸಂಬಳದಷ್ಟೇ ಅವನಿಗೂ ಕೊಡುತ್ತಿದ್ದರು...'' ಎಂದು ವ್ಯಂಗ್ಯ ಮಿಶ್ರಿತ ದನಿಯಲ್ಲಿ ಹೇಳಿ ಆತನ ಮುಖವನ್ನೇ ನೋಡಿ, ''ನಿನಗೂ ಅಷ್ಟೇ ಕೊಡಬೇಕೆಂದು ಇಲ್ಲಿ ಶಿಫಾರಸು ಕೂಡ ಮಾಡ್ತೇನೆ. ಸಾಕಲ್ಲ?'' ಎಂದೆ.

ನಾನು ಸಿಟ್ಟುಗೊಂಡಿದ್ದೇನೆ ಎಂದು ತಿಳಿದ ಆತ, ''ಸಾರಿ ಸರ್'' ಎಂದು ಹೇಳಿ ಹೊರಟು ಹೋದ.

ನಾಲ್ವರು ಸದಸ್ಯರ ಒಂದು ಬೋರ್ಡು ಮತ್ತು ಇಬ್ಬರು ಬಾಸ್‌ಗಳ ಕೈಕೆಳಗೆ, ನೂರು ಅಸಿಸ್ಟೆಂಟುಗಳ ನಡುವೆ ಕೆಲಸ ಮಾಡುವಾಗ ನನಗೆ ಹಲವು ಬಾರಿ ಹೀಗೆ ಒರಟಾಗಿ ಮಾತಾಡಲೇ ಬೇಕಾದ ಸನ್ನಿವೇಶಗಳು ಬರುತ್ತಲೇ ಇರುತ್ತವೆ. ಸುತ್ತಲೂ ಇರುವವರ ಬೇಜವಾಬ್ದಾರಿ, ಮ್ಯಾನೇಜರರ ಎಡಬಿಡಂಗಿತನ, ಸಾಹುಕಾರರ ಅನಿಶ್ಚಿತತೆ, ಗಿರಾಕಿಗಳ ಕೋಪ, ಸರಕಾರೀ ಅಧಿಕಾರಿಗಳ ದರ್ಪ, ಕೆಲ ಸಹೋದ್ಯೋಗಿಗಳ ಅಸಹಾಯಕತೆ – ಇಂತಹ ಸುರುಳಿ ಸುಳಿಯಲ್ಲಿ ಸಂಬಂಧವೇ ಇಲ್ಲದ ನಾನು ಸಿಕ್ಕಿಹಾಕಿಕೊಂಡು ಆಚೆಗೂ ಅಲ್ಲ ಈಚೆಗೂ ಇಲ್ಲ ಎಂಬ ಶೈಲಿಯ ಉತ್ತರಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಅದರಿಂದ ತಪ್ಪಿಸಿಕೊಳ್ಳಲು ಈ ರೀತಿಯ ತೀರಾ ಒರಟು ಉತ್ತರ ಕೊಡುತ್ತಿದ್ದೆ. ಹಾಗೆ ಉತ್ತರಕೊಟ್ಟಾಗ ಹಲವರು ನನಗೆ ಕೋಪ ಬಂದಿದೆಯೆಂದು ಸುಮ್ಮನಾಗುತ್ತಿದ್ದರು. ಕೆಲವೊಮ್ಮೆ ನನಗೆ ಮಾತನಾಡುವ ಮನಸ್ಸಿಲ್ಲವೆಂದೂ ಕೂಡ ತೀರ್ಮಾನಿಸಿ ಹೊರಟುಬಿಡುತ್ತಿದ್ದರು. ಆದರೆ, ಅಂತಹ ಉತ್ತರಗಳು ನನಗೆ ಉಸಿರಾಡಲು ಸಮಯಾವಕಾಶ ಕಲ್ಪಿಸಿಕೊಡುತ್ತಿದ್ದವು. ''ಅವರು ಒಳ್ಳೆಯವರು, ಆದರೆ ಮೂಡಿ ಜನ, ಮಾತನಾಡುವಾಗ ಸ್ವಲ್ಪ ಜಾಗ್ರತೆ ಇರಬೇಕು'' ಎಂದು ನನ್ನಬಗ್ಗೆ ನಮ್ಮಲ್ಲಿ ಪ್ರಚಾರವಿತ್ತು. ನೇರ ನಡೆನುಡಿಗೆ ಅವಕಾಶ ಇಲ್ಲವಾದಲ್ಲಿ ಹೀಗೆ ನನ್ನ ಉಡಾಫೆ ಪ್ರಕಟವಾಗುತ್ತದೆ ಎಂದು ಅರ್ಥಮಾಡಿಕೊಂಡವರು ತೀರಾ ವಿರಳ. ರಿಟೈರ್ ಆಗುವವರೆಗೆ ನೌಕರಿಗೆ ಅಂಟಿಕೊಂಡಿರಬೇಕಾದರೆ ಕೆಲವರೊಂದಿಗೆ ಹಾಗೆ ವ್ಯವಹರಿಸುವ ಅಗತ್ಯವೂ ಇತ್ತು!

ಇವನೂ ಹಾಗೆಯೇ... ಏನಂದುಕೊಂಡನೇನೋ... ಹೇಗೂ ಅಂದುಕೊಳ್ಳಲಿ... ಆತನ ಅಪ್ಲಿಕೇಶನ್ನಿನ ಮೇಲೆ "ಓಕೆ" ಎಂದು ಬರೆದು ಸಹಿ ಹಾಕಿ ಮ್ಯಾನೇಜರರ ಬಳಿ ಕಳುಹಿಸಿ ನಿಶ್ಚಿಂತನಾದೆ.

★★★

ಭೀಮಸೇನ ಹೀಗೆ ನಮ್ಮಲ್ಲಿ ಉದ್ಯೋಗಕ್ಕೆ ಸೇರಿಕೊಂಡಿದ್ದ. ಕಾಲಕಾಲಕ್ಕೆ ಚಹಾ ತಂದುಕೊಡುತ್ತಿದ್ದ. ನನ್ನಲ್ಲಿ ಹೆಚ್ಚು ಮಾತಾಡುತ್ತಿರಲಿಲ್ಲ. ತಿಂಗಳ ಕೊನೆಗೆ ವೇತನಪಟ್ಟಿ ಸಿದ್ಧಪಡಿಸುವಾಗ ಆತನ ಸಂಬಳ ಎಷ್ಟು ನಿಗದಿ ಮಾಡಿದ್ದೀರಿ ಎಂದು ಮ್ಯಾನೇಜರರನ್ನು ಕೇಳಿದ್ದೆ. ''ಹೌದಲ್ಲ, ಅದನ್ನು ಇನ್ನೂ ನಿರ್ಧಾರ